ಶ್ರೀ ಕೊಣಂದೂರು ಲಿಂಗಪ್ಪ.—ಅದರ ಸಾಧ್ಯಾಸಾಧ್ಯತೆಗಳನ್ನು ವಿಚಾರ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ತೆಗೆದುಕೊಳ್ಳಬಹುದು ? ಕೇರಳ, ತಮಿಳುನಾಡು ಅಂಧ್ರ ರಾಜ್ಯಗಳಲ್ಲಿ ಅಯಾ ರಾಜ್ಯಗಳ ಮುಖಾಪುರುಷರ ಜನ್ಮ ದಿನಾಚರಣೆಯನ್ನು ಅಧಿಕೃತ ರಜಾ ದಿನವನ್ನಾಗಿ ಆ ಸರ್ಕಾರಗಳು ಘೋಷಣೆ ಮಾಡಿರುವುದನ್ನು ತಾವು ಪರಿಗಣನೆಗೆ ತೆಗೆದುಕೊಂಡು ಇವತ್ತು ಅಥವಾ ನಾಳೆಯೊಳಗೆ ಈ ವಿಚಾರವನ್ನು ಇತ್ಯರ್ಥ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಇಂಡಿಯಾ ಸರ್ಕಾರದವರು ವರ್ಷದಲ್ಲಿ ಎಷ್ಟು ದಿನಗಳು ರಜಾದಿನಗಳೆಂದು ಘೋಷಣೆ ಮಾಡುತ್ತಾರೆ. ಅದನ್ನು ನೋಡಿಕೊಂಡು ಅದರಲ್ಲಿ ಯಾವ ಯಾವ ದಿನಗಳನ್ನು ನಾವು ರಜಾದಿನಗಳೆಂದು ಘೋಷಣೆ ಮಾಡಬೇಕಾಗಿದೆ ಎಂಬುದನ್ನು ತಿಳಿಸಿಕೊಂಡು ನಮ್ಮ ಕರ್ನಾಟಕ ರಾಜ್ಯದ ಜನರಿಂದ ಯಾವ ಯಾವ ಇನ್ವಿಟೇಷನ್‌ನವರು ನಮಗೆ ಬರೆದಿದ್ದಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ಎಷ್ಟು ರಜಾ ದಿನಗಳನ್ನು ಕೊಡಬೇಕೆಂಬುದನ್ನು ನೋಡಿಕೊಂಡು, ಅಷ್ಟರೊಳಗೆ ಇದನ್ನೆಲ್ಲಾ ಆಳವಡಿಸಿಕೊಂಡು ಸಾಧ್ಯವಾದರೆ ಮಾಡುತ್ತೇವೆ

ಶ್ರೀ ಬಿ. ಎಂ ಹೊರಕೇರಿ.—ಏಪ್ರಿಲ್ ತಿಂಗಳಲ್ಲಿ ಬನಶಂಕರಿಯಾತ್ರೆಯನ್ನು ಮಾಡಬೇಕೆಂದು ಶಾಸಕರೆಲ್ಲಾ ಒಂದು ಮನವಿಯನ್ನು ಸಲ್ಲಿಸಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್.ಎಂ. ಚನ್ನಬಸಪ್ಪ.— ಬಂದಿದೆ.

ಶ್ರೀ ಎಸ್.ಪೈ. ಪಾಟೀಲ್.—ಮಹಾಪುರುಷರು ಒಂದೊಂದು ವಿಷಯದಲ್ಲೂ ಯಾವರೀತಿಯ ಚೆರ್ಚೆಯಿಲ್ಲದೇ ತಾವಾಗಿಯೇ ಅನೇಕ ವಿಚಾರಗಳನ್ನು ಜನತೆಗೆ ಬಿಚ್ಚಿದ್ದಾರೆ. ಆದರಂತೆ ದೇಶೋದ್ಧಾರ ಮಾಡಿದಂತಹ ಸಕಲ ಮಹಾಪುರುಷರ ವಿಷಯದಲ್ಲೂ ವಿಚಾರ ಮಾಡುವ ಅವಶ್ಯಕತೆ ಇರುವುದರಿಂದ ಸರ್ಕಾರ ಈ ಕೆಲಸವನ್ನು ತಾವಾಗಿಯೇ ಮಾಡಬೇಕು.

ಶ್ರೀ ಎಚ್ ಎಂ ಚನ್ನಬಸಪ್ಪ —ವಿಚಾರ ಮಾಡತಕ್ಕಂಥ ಅವಶ್ಯಕತೆ ಪ್ರತಿಯೊಂದು ವಿಷಯಕ್ಕೂ ಇದೆ.

ಶ್ರೀ ಎಸ್ ಪೈ ಪಾಟೀಲ್.—ಇದು ಸ್ಪಷ್ಟವಾಗಿ ಕಣ್ಣಿಗೆ ಕಾಣಿಸಿದರೂ ಚಸ್ಮ ಬೇರೆ ಏತಕ್ಕೆ ಬೇಕು ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಕಣ್ಣಿಗೆ ಕಂದರೂ ಶಾಸ್ತ್ರೀಯ ಕ್ರಮ ಅನುಸರಿಸಿ ಎಂದು ಹೇಳಿದ್ದಾರೆ

ಶ್ರೀ ಎಸ್.ಪೈ. ಪಾಟೀಲ್.—ವಿಧಾನಸಾಧದಲ್ಲಿ ಇದಕ್ಕೇ ಒಂದು ಎನ್‌ಕ್ವೈರಿ ಕಮಿಟಿ ಬೇಕೇನು ?

ಶ್ರೀ ಎಚ್.ಎಂ ಚನ್ನಬಸಪ್ಪ.—ಎಲ್ಲಾ ವಿಷಯ ಪ್ರತ್ಯಕ್ಷವಾಗಿ ಕಾಣುತ್ತಾ ಇದೆ.

Held over Question No. 237

re : Sites granted in Hassan City

(held over on 21-6-1977)

ಶ್ರೀ ಕೆ.ಹೆಚ್. ಹನುಮೇಗೌಡ —ಸ್ಟಾರ್ ಈ 1131 ಅಪ್ಲಿಕೇಷನ್‌ಗಳ ಪೈಕಿ 12 ಜನಕ್ಕೆ ನಿವೇಶನಗಳನ್ನು ಕೊಟ್ಟಿದೆ ಎಂದು ಉತ್ತರವಲ್ಲಿ ಬರೆದಿದೆ ಮುನಿಸಿಪಲ್ ಅಥಾರಿಟಿಯವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರ ಮೇಲೆ ಈ 122 ಜನಕ್ಕೆ ನಿವೇಶನಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆಯೇ ?

ಶ್ರೀ ಡಿ.ಕೆ. ನಾಯಕರ್.—ಈ 132 ಸೈಟುಗಳ ಪೈಕಿ ಬ್ಯಾಂಕಿಗೆ ಕೊಟ್ಟಿದ್ದು ಒಂದನ್ನು ಮಾತ್ರ ಸರ್ಕಾರ ಮಂಜೂರು ಮಾಡಿದೆ. ಇನ್ನೊಂದನ್ನು ಬೈಪೇ ಆಫ್ ಅಪೀಲ್ ಶ್ರೀ ಸುಜಾವದ್ದೀನ್ ಖಾನ್ ಎಂಬುವರಿಗೆ ಕೊಟ್ಟಿದೆ. ಇನ್ನು ಮಿಕ್ಕವುಗಳು ಯಾವುದು ಸರ್ಕಾರಕ್ಕೆ ಬಂದಿಲ್ಲ. ಡಿವಿಜನಲ್ ಕಮಿಷನರ್‌ರವರಿಗೆ 75 ಪ್ರಪೋಸಲ್‌ಗಳನ್ನು ಕಳಿಸಿದ್ದೇವೆ ಎಂದು ವರದಿ ಬಂದಿದೆ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಮುನಿಸಿಪಾಲಿಟಿಗೆ ಕಳುಹಿಸಿದ್ದೇವೆ.

ಶ್ರೀ ಕೆ ಹೆಚ್ ಹನುಮೇಗೌಡ.—ಸ್ವಾಮಿ, ಈ 132 ಸೈಟುಗಳ ಪೈಕಿ ಹತ್ತಾರು ವರ್ಷಗಳ ಹಿಂದೆ ಅಧಿಕಾರದಲ್ಲಿ ಇದಂತಹ ಮುನಿಸಿಪಲ್ ಅಥಾರಿಟಿಯವರು ಸಾರ್ವಜನಿಕರಿಗೆ ಈ ಸ್ಥಳಗಳು ಅವಶ್ಯಕವಾಗಿ ಬೇಕಾಗಿದೆಯೆಂದು ಹೇಳಿ ಬಹಳ ವರ್ಷಗಳಿಂದ ಅದನ್ನು ಉಳಿಸಿಕೊಂಡು ಬಂದಿದ್ದರು. ನಾನು ಅಫಿಸಿಯರ್ ಮೆಂಬರ್ಸ್ ಅಧಿಕಾರದಲ್ಲಿದ್ದಾಗ ಮುನಿಸಿಪಲ್ ಅಡ್ಮಿನಿಸ್ಟ್ರೇಟರ್ ಬೇರೆ ಕಡೆಗೆ ವರ್ಗ ಆದಮೇಲೆ ಚಾರ್ಜ್ ಕೊಡುವ ಹಿಂದಿನ ದಿವಸ ಅವರು ರಾತ್ರೋರಾತ್ರಿ ಕಳಿತುಕೊಂಡು ಸುಮಾರು 25 ಲಕ್ಷ ರೂಪಾಯಿಗಳ ಬೆಲೆಬಾಳತಕ್ಕಂಥ ಸೈಟುಗಳನ್ನು ತಮ್ಮ ಸ್ವಂತ ಅಸ್ತಿಯ ಹಾಗೆ ಅಕ್ರಮವಾಗಿ ಕೊಟ್ಟುಬಿಟ್ಟಿದ್ದಾರೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಈ ಸೈಟುಗಳನ್ನು ಆ ರೀತಿ ಕೊಡಬೇಕಾದರೆ, ಲೀಸ್ ಔಟ್ ಮಾಡಬೇಕಾದರೆ ಕರ್ನಾಟಕ ಮುನಿಸಿಪಲ್ ಮ್ಯಾನ್ಯೂಲ್ 1966ರ ಪ್ರಕಾರ ಕಾನೂನಿನ ಕ್ರಮವನ್ನು ಅನುಸರಿಸಿ ಲೀಸ್ ಔಟ್ ಗ್ರಾಂಟ್ ಕೊಟ್ಟಿದ್ದಾರೆಯೇ ಎಂಬ ದನ್ನು ಪರಿಶೀಲನೆ ಮಾಡಿ ತಿಳಿಸಿ

ಶ್ರೀ ಡಿ.ಕೆ. ನಾಯಕರ್.—ಆ ಪ್ರಪೋಸರ್‌ಗಳು ಮಂಜೂರಾತಿಗಾಗಿ ಸರ್ಕಾರಕ್ಕೆ ಬಂದಾಗ ಅವುಗಳನ್ನು ಸಮಗ್ರವಾಗಿ ಮಾಡಿದ್ದಾರೆಯೋ ಇಲ್ಲವೋ ಎನ್ನುತಕ್ಕಂಥದ್ದನ್ನು ಪರಿಶೀಲನೆ ಮಾಡಿ ಅಪ್ರೂವರ್‌ಗೆ ಕೊಡುವಂತಾದ್ದು ಇದೆ. ಈಗಾಗಲೇ ನಾನು ಹೇಳಿದಂತೆ ನವಲ್ಲಿಗೆ ಒಂದು ಪ್ರಪೋಸರ್ ಬಂದಿದ್ದು, ಅದನ್ನು ಅಪ್ರೂವ್ ಮಾಡಿದ್ದೇವೆ ಇನ್ನೊಂದನ್ನು ಸುಜಾವದ್ದೀನ್ ಖಾನ್ ಎಂಬುವರಿಗೆ ಕೊಟ್ಟಿದೆ. ಮಿಕ್ಕವುಗಳಲ್ಲಿ 75 ಪ್ರಪೋಸಲ್‌ಗಳನ್ನು ಡಿವಿಜನಲ್ ಕಮೀಷನರ್‌ರವರಿಗೆ ಕಳುಹಿಸಿದ್ದಾರೆ ಆದ್ದರಿಂದ ಇದನ್ನು ಕಾನೂನು ಬದ್ಧವಾಗಿ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಮಂಜೂರಾತಿ ಮಾಡುವ ಕಾಲಕ್ಕೆ ಪರೀಕ್ಷೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಆ ಸೈಟುಗಳನ್ನು ಇನ್ನೂ ಮಂಜೂರು ಮಾಡಿಲ್ಲ ಎಂದು ಸರ್ಕಾರದವರು ಹೇಳುತ್ತಿದ್ದಾರೆ. 73 ಸೈಟುಗಳನ್ನು ಈಗಾಗಲೇ ಆ ಅಧಿಕಾರಿಗಳಿಗೆ ಕೊಡುವ ಹಿಂದಿನ ದಿವಸ ಅಕ್ರಮವಾಗಿ ಕೊಟ್ಟಿದ್ದಾರೆಂದು ಮಾನ್ಯ ಹನುಮೇಗೌಡರು ಹೇಳುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ ಆ ನವರಿ ಅಧಿಕಾರಿ ನವಲ್ಲಿಯಲ್ಲಿಯೂ ಇದ್ದರು. ಅಲ್ಲಿಂದ ಬೀದರ್‌ಗೆ ಹಾಕಿದ್ದಾರೆ. ಈಗ ಹೊನಪೇಟೆಯಲ್ಲಿ ಅವರನ್ನು ಇಟ್ಟುಕೊಂಡಿದ್ದಾರೆ. ಅವರನ್ನು ಸ್ವತಃ ತಮ್ಮ ಆಫೀಸಿನಲ್ಲಿ ಏತಕ್ಕೆ ಇಟ್ಟುಕೊಳ್ಳಬಾರದು ?

ಶ್ರೀ ಡಿ ಕೆ. ನಾಯ್ಕರ್.—ಅವರು ಎಷ್ಟು ಸ್ಥಾನಗಳನ್ನು ಈಗ ಕಂಡಿದ್ದಾರೆ ಎಂಬುದನ್ನು ನೋಡಿದರೆ ನಮ್ಮ ಆಫೀಸಿನಲ್ಲಿ ಅಷ್ಟೇ ಕೆಲಸ ಮಾಡಬಹುದು ಎಂಬುದನ್ನು ತಿಳಿದುಕೊಂಡು ಅವರನ್ನು ತೆಗೆದುಕೊಳ್ಳುವುದಕ್ಕೆ ಆಗಲ್ಲ.

ಶ್ರೀ ಕೆ.ಹೆಚ್. ಹನ ಮೇಗೌಡ —ಈ ಅಕ್ರಮ ವ್ಯವಹಾರ ನಡೆದಿರುವ ಬಗ್ಗೆ ತಮಗೆ ಅನೇಕ ಅರ್ಜಿಗಳು ಬಂದಿವೆ. ನಾನೂ ಒಂದು ಅರ್ಜಿಯನ್ನು ಬರೆದಿದ್ದೇನೆ. ಇದು ರೂರ್ಸ್ ಪ್ರಕಾರ ನಡೆದಿಲ್ಲ, ಈ ಬಗ್ಗೆ ಎನ್‌ಕ್ವೈರಿ ಮಾಡಿ ಅಕ್ರಮವಾಗಿ ಕೊಟ್ಟಿರುವ ಸೈಟುಗಳನ್ನು ವಜಾ ಮಾಡಿ ಮುನಿಸಿಪಲ್ ಆಸ್ತಿಯನ್ನು ಉಳಿಸಬೇಕೆಂದು ನಾವು ತಮ್ಮ ಗಮನಕ್ಕೆ ತಂದಿದ್ದೇವೆ. ಸಾರ್ವಜನಿಕರು ಅರ್ಜಿ ಬರೆದಿದ್ದಾರೆ ಇದನ್ನು ಕರ್ನಾಟಕ ಮುನಿಸಿಪಲ್ ಮ್ಯಾನ್ಯೂಲ್ 1966ರ ಪ್ರಕಾರ ಮಾಡಿಲ್ಲ ಮೊದಲು ಲೋಕಲ್ ಪೇಪರ್‌ನಲ್ಲಿ ಅಡ್ವರ್‌ಟೈಸ್‌ಮೆಂಟ್ ಕೊಟ್ಟು ಅರ್ಜಿಗಳನ್ನು ಕರೆಯಬೇಕು. ಅರ್ಜಿಗಳು ಬಂದಮೇಲೆ ಅವುಗಳನ್ನು ಸ್ಕ್ರುಟನೈಸ್ ಮಾಡಿ ಮಂಜೂರಾತಿ ಕೊಡಬೇಕು ಈ ರೀತಿಯಲ್ಲಿ ಆಗಿಲ್ಲ ಇಲ್ಲಿ ಅಕ್ರಮಗಳು ನಡೆದಿರುವುದರಿಂದ ಇದರ ಬಗ್ಗೆ ಕೂಲಂಕಷ ವಿಚಾರಣೆ ನಡೆಸಿ ಆ ಸೈಟುಗಳನ್ನು ವಜಾ ಮಾಡುವುದರ ಜೊತೆಗೆ ಈ ಅಕ್ರಮ ವ್ಯವಹಾರದಲ್ಲಿ ಒಳಗಾಗಿರತಕ್ಕಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ.ಕೆ ನಾಯಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೊನ್ನೆದಿವಸ ಈ ನಣ್ಣ ನಣ್ಣ ಸೈಟುಗಳನ್ನು ಲ್ಯಾಂಡ್‌ಲೆಸ್, ಸ್ಲೈಟ್‌ಲೆಸ್ ಪರ್ಸನ್ಸ್‌ಗೆ ಕೊಟ್ಟಿದ್ದಾರೆ, ಆ ವುಗಳನ್ನು ಕ್ಯಾನ್‌ಸಲ್ ಮಾಡುವುದು ಬೇಡ ಎಂದು ಹೇಳಿದ್ದಾರೆ. ಇನ್ನು ಕೆಲವು ಸೈಟುಗಳನ್ನು ಶ್ರೀಮಂತರು ಗಳಿಗೆ ಕೊಟ್ಟಿದ್ದಾರೆ. ಆ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಬೇಕು ಎಂದು ಮಾನ್ಯ ಸದಸ್ಯರು ಇದೇ ಸದನದಲ್ಲಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಮಾಹಿತಿಗಾಗಿ ಹೇಳಬಯಸುವುದಾದರೆ, ಈ 112 ಸೈಟುಗಳ ಪೈಕಿ ಕೆಲವನ್ನು 3 ಇನ್‌ಸ್ಟಿಟೂಷನ್‌ಗಳಿಗೆ ಕೊಟ್ಟಿದ್ದಾರೆ ಎರಡನ್ನು ರಿಚ್ ಪರ್ಸನ್ಸ್‌ಗೆ ಕೊಟ್ಟಿದ್ದಾರೆ. 12ನ್ನು ಮಿಡಲ್‌ಕ್ಲಾಸ್ ಗೌರ್ನಮೆಂಟ್ ಸರ್ವೆಂಟ್ಸ್‌ಗೆ ಕೊಟ್ಟಿದ್ದಾರೆ. ಹೌಸ್‌ಲೆಸ್ ಪರ್ಸನ್ಸ್‌ಗೆ 13 ಕೊಟ್ಟಿದ್ದಾರೆ. ಹರಿಜನರಿಗೆ 64 ಕೊಟ್ಟಿದ್ದಾರೆ ಪೂರರ್ ಕ್ಲಾಸ್‌ಗೆ 28 ಕೊಟ್ಟಿದ್ದಾರೆ. ಇವುಗಳಲ್ಲಿ ಯಾವುದನ್ನು ಕ್ಯಾನ್ಸಲ್ ಮಾಡಬೇಕು ಎಂಬುದನ್ನು ನೀವೇ ಹೇಳಿ.

ಶ್ರೀ ಕೆ.ಹೆಚ್. ಹನುಮೇಗೌಡ. ನಾನು ಹೇಳಿರುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಹತ್ತಾರು ವರ್ಷಗಳಿಂದ ಮುನಿಸಿಪಾಲಿಟಿಯವರು ಉಳಿಸಿಕೊಂಡು ಬಂದಿರತಕ್ಕಂಥ ಜಾಗಗಳು, ಅಂದರೆ ಪಾರ್ಕ್, ಹಳ್ಳೀ ಬಸ್‌ನ್ಯಾಂಡ್ ಜಾಗ, ಸಂತೆ ನಡೆಯತಕ್ಕಂಥ ಜಾಗ, ಜಾತ್ರೆಗಳು ನಡೆಯತಕ್ಕಂಥ ಜಾಗಗಳನ್ನು ಯಾವ ಒಂದು ರೂಲ್ಸನ್ನು ಅನುಸರಿಸದೇ ದುರ್ವ್ಯವಹಾರ ಮಾಡಿ ಕೊಟ್ಟಿರತಕ್ಕಂಥ ಈ ಜಾಗಗಳನ್ನು ಕ್ಯಾನ್ಸಲ್ ಮಾಡಬೇಕು. ಮಾನಕ್ಕೆ ಕೊಟ್ಟಿರತಕ್ಕಂಥ ಸೈಟುಗಳನ್ನು ಕ್ಯಾನ್ಸಲ್ ಮಾಡಿ ಎಂದು ನಾನು ಹೇಳುವುದಿಲ್ಲ ಈ ಜಾಗಗಳನ್ನು ಆ ಅಧಿಕಾರಿ ಕೆಲವರಿಗೆ ಅಕ್ರಮವಾಗಿ ಕೊಟ್ಟು ಅವರಿಂದ 10 ಸಾವಿರ, 15 ಸಾವಿರ ರೂಪಾಯಿಗಳನ್ನು ತೆಗೆದು ಕೊಂಡಿದ್ದಾರೆ. ಹೀಗೆ 25 ಲಕ್ಷ ರೂಪಾಯಿಗಳು ಬೆಲೆ ಬಾಳತಕ್ಕಂಥ ಆಸ್ತಿಯನ್ನು ಅಕ್ರಮವಾಗಿ ಕೊಟ್ಟಿರತಕ್ಕಂಥಾದ್ದನ್ನು ವಿಚಾರಣೆ ಮಾಡಿ ಅದನ್ನು ಕ್ಯಾನ್ಸಲ್ ಮಾಡುವುದರ ಜೊತೆಗೆ ಈ ಅಕ್ರಮವ್ಯವಹಾರದಲ್ಲಿ ಯಾರು ಒಳಗಾಗಿದ್ದಾರೆ ಅವರ ಬಗ್ಗೆ ಎನ್‌ಕ್ವೈರಿ ಮಾಡಿ ಕ್ರಮವನ್ನು ತೆಗೆದು ಕೊಳ್ಳಬೇಕು. ಆ ಅಧಿಕಾರಿ ಗುಲ್ಬರ್ಗದಲ್ಲಿ ಇರುವಾಗ 6 ಲಕ್ಷ ಹೊಡೆದಿದ್ದಾನೆ. ಶಿವಮೊಗ್ಗದಲ್ಲಿ 7 - 8 ಲಕ್ಷ ರೂಪಾಯಿಗಳನ್ನು ಹೊಡೆದಿದ್ದಾನೆ ಅಲ್ಲಿ ಒಂದು ವರ್ಷ ಸಸ್ಪೆಂಷನ್‌ನಲ್ಲಿ ಇತ್ತ ಇದ್ದ. ಮಂಡ್ಯದಲ್ಲಿದ್ದಾಗ 6 ಲಕ್ಷ ರೂಪಾಯಿಗಳನ್ನು ಹೊಡೆದಿದ್ದಾನೆ. ಅಲ್ಲಿ ಡಿವಿಜನಲ್ ಕಮೀಷನರ್ ಅವನನ್ನು ಡಿಸ್‌ಮಿಸ್ ಮಾಡಬೇಕೆಂದು ರೆಕ್‌ಮೆಂಡ್ ಮಾಡಿದ್ದಾರೆ. 3 ಕಡೆಗಳಲ್ಲಿ 20 ಲಕ್ಷ ರೂಪಾಯಿಗಳನ್ನು ಹೊಡೆದಿದ್ದಾನೆ. ಹೀಗೆ 25 ಲಕ್ಷ ಬೆಲೆ ಬಾಳತಕ್ಕಂಥ ಆಸ್ತಿಯನ್ನು ಬೇರೆಬೇರೆಯವರಿಗೆ ಕೊಟ್ಟು 4—5 ಲಕ್ಷ ರೂಪಾಯಿಗಳನ್ನು ಮಾಡಿಕೊಂಡಿದ್ದಾನೆ.

ಆ ಅಧಿಕಾರಿಯನ್ನು ಕೆಲಸದಿಂದ ತೆಗೆದರೆ ಪ್ರಯೋಜನವಿಲ್ಲವೆಂದು ಹೇಳುತ್ತಿದ್ದೇ ? ಆ ಬಗ್ಗೆ ಮಾತನಾಡಬೇಕಾದರೆ ನಾಚಿಕೆಯಾಗುತ್ತದೆ. ಹಾನನದಲ್ಲಿ ತಿರುಗಾಡುವುದಕ್ಕೆ ಆಗುತ್ತಿಲ್ಲ ಈ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂತಹ ಅಯೋಗ್ಯ ಅಧಿಕಾರಿಗಳಿಂದ ನಾವು ತರಬಾಗಿಸಬೇಕಾಗಿದೆ. ಇವನ್ನು ಯಾರು ಮತ್ತು ಯಾತಕ್ಕೋಸ್ಕರ ಇಂತಹವನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ ಈ ಅಧಿಕಾರಿ ಶಿವಮೊಗ್ಗದಲ್ಲಿದ್ದಾಗ ಕೆಲವೊಂದು ಅಕ್ರಮಗಳು ನಡೆದಿವೆ ಎಂದು ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದರು. ಆ ಬಗ್ಗೆ ವಿಚಾರಣೆಗಾಗಿ ಡಿವಿಜನಲ್ ಕಮಿಷನರ್ ಕಡೆಗೆ ಕಳಿಸಿಕೊಟ್ಟಿದ್ದೇವೆ. ಅವರಿಂದ ರಿಪೋರ್ಟ್ ಬಂದಮೇಲೆ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವನು ಶಿವಮೊಗ್ಗ ಬಿಟ್ಟು ಎಷ್ಟು ದಿವಸವಾಯಿತು ?

ಶ್ರೀ ಕೆ ಎಚ್. ಹನುಮೇಗೌಡ —ಅವನು ಸಸ್ಪೆಂಡ್‌ನಲ್ಲಿರುವಾಗ ಪ್ರೊಮೋಷನ್ ಯಾತಕ್ಕೆ ಕೊಟ್ಟಿರಿ ? ಯಾತಕ್ಕೆ ಬೇಕು ಇಂತಹ ಅಧಿಕಾರಿ ? ನಿಸ್ಪ್ರಹ ಅಧಿಕಾರಿಗಳ ಅಭಾವವೇ ?

ಶ್ರೀ ಕೋಣಂದೂರು ಲಿಂಗಪ್ಪ.-ಅವನಿಗೂ ಮಂತ್ರಿಗಳಿಗೂ ಶಾಮೀಲಿದೆಯೇನೋ ಎಂದು ನಮಗೆ ಅನುಮಾನ ಬರುತ್ತಿದೆ. 10 ಲಕ್ಷ ರೂಪಾಯಿ ಹೊಡೆದಿದ್ದಾನೆ.

ಶ್ರೀ ಡಿ.ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಪ್ರೊಪೋಷನ್ ಬಗ್ಗೆ ಕೇಳಿದ್ದಾರೆ. ಎನ್‌ಕ್ವೈರಿ ಪೆಂಡಿಂಗ್ ಇದ್ದಾಗ ಪ್ರೊಪೋಷನ್ ಕೊಟ್ಟಿರುವುದು ಎನ್‌ಕ್ವೈರಿ ಪೂರ್ಣ ಆದಹಾಗೆ ಅಲ್ಲ. ಮಾನ್ಯ ಸದಸ್ಯರು ವಿಷಯವನ್ನು ಚನ್ನಾಗಿ ತಿಳಿದುಕೊಂಡು ಮಾತನಾಡಿದರೆ ನಾನು ಸಂಪೂರ್ಣವಾಗಿ ಹೇಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಡಿವಿಜನರ್ ಕಮಿಷನರ್‌ಗೆ ವಿಚಾರಣೆಗೆ ಹೋಗಿ ಎಷ್ಟು ವರ್ಷವಾಯಿತು ?

ಶ್ರೀ ಕೆ.ಎಚ್. ಹನುಮೇಗೌಡ.—ಅವನೇನಾದರೂ ನಿಸ್ಪೃಹ ಅಧಿಕಾರಿಯಾಗಿದ್ದರೆ, ನಾನು ಹೇಳಿದ್ದು ನುಳ್ಳಾದರೆ ಬೇಕಾದರೆ ನಾನು ರಾಜೀನಾಮೆ ಕೊಡುತ್ತೇನೆ. ನೀವು ಹೇಳಿದ್ದು ಮಾಡುತ್ತೇನೆ ತೆಗೆದು ಪ್ರಾಣ ಕಳೆದುಕೊಳ್ಳುತ್ತೇನೆ. ನೀವು ಏನು ಮಾಡುತ್ತೀರಿ ಹೇಳಿ ? ಯೋಗ್ಯ ಅಧಿಕಾರಿಗಳ ಮೇಲೆ ಆಪಾದನೆ ಮಾಡುವ ಹುಚ್ಚು ನಮಗಿಲ್ಲ. ಅವನು ಶುದ್ಧ ಅಯೋಗ್ಯ. ಸಾವಿರಾರು ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿ.

ಶ್ರೀ ಎಚ್ ಎಂ. ಚನ್ನಬಸಪ್ಪ —ವಿಷಯವು ಬೇನೋ ಗಹನವಾಗಿದೆ ಎಂಬುದನ್ನು ಮಾನ ಸದಸ್ಯರು ತೀವ್ರವಾಗಿ ಗಮನಿಸಿರತಕ್ಕದ್ದು ಸರಿಯಾಗಿದೆ. ಅದನ್ನೇ ಇನ್ನಷ್ಟು ಸೌಮ್ಯವಾಗಿ ನಿಧಾನವಾಗಿ, ಒಳ್ಳೆಯ ಮಾತಿನಲ್ಲಿ ಹೇಳಿದರೆ ಒಳ್ಳೆಯದು.

ಶ್ರೀ ಕೆ ಎಚ್. ಹನುಮೇಗೌಡ.—ಅವನು ಹಾಸನದಲ್ಲಿ ಮಾತ್ರ ಇದ್ದವನಲ್ಲ. ಬೇರೆಬೇರೆ ಕಡೆಗಳಿಂದ ಬಂದಿದ್ದಾನೆ. ಅವನು ಮಾಡಿರುವ ವ್ಯವಹಾರಗಳನ್ನು ಹೇಳಿಬಾರದು, ಹೇಳಿದರೆ ಸಂಕಟವಾಗುತ್ತದೆ.

ಶ್ರೀ ಡಿ.ಕೆ. ನಾಯ್ಕರ್ —ಮಾನ್ಯ ಸದಸ್ಯರು ಸರ್ಕಾರವನ್ನು ಹೇಗೆ ನಡೆಸುತ್ತಾರೆಂಬುದನ್ನು ತಿಳಿದುಕೊಳ್ಳಬೇಕು. ನಾವು ರಿಪೋರ್ಟ್ ನೋಡಿ ಪ್ರೊಸೀಜರ್ ಫಾಲೋ ಮಾಡಬೇಕು. ಹಾಗೆ ಪ್ರೊಸೀಜರ್ ಫಾಲೋ ಮಾಡದೇ ನುಮ್ಮನೆ ಡಿಸ್‌ಮಿಸ್ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ರೂಲ್ ನಂ. 285 ಪ್ರಕಾರ ಡಿಸ್‌ಮಿಸ್ ಮಾಡಲಿಲ್ಲವೇ ಅದೇ ರೀತಿ ಇವನಿಗೂ ಏತಕ್ಕೆ ಮಾಡಬಾರದು ?

ಶ್ರೀ ಡಿ.ಕೆ ನಾಯ್ಕರ್.— ಪ್ರೊಸೀಜರ್ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ತಾರತಮ್ಯ ಏತಕ್ಕೆ ? ಬೇರೆಯವರನ್ನು 285 ಪ್ರಕಾರ ತಕ್ಷಣ ಡಿಸ್‌ಮಿಸ್ ಮಾಡಿದ್ದೀರಿ. ಹಾಡುಹಗಲಲ್ಲಿ ಕಳ್ಳತನ ಮಾಡಿದ ಕಳ್ಳನನ್ನು ಹಿಡಿದುಕೊಟ್ಟರೆ ಅವನಿಗೆ ಪ್ರೊಮೋಷನ್ ಕೊಡುತ್ತೀರಿ.

ಶ್ರೀ ಡಿ.ಕೆ. ನಾಯ್ಕರ್.—ಎಂಥೆಂಥ ಸಂದರ್ಭಗಳಲ್ಲಿ 285 ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನೋಡಿದ್ದೀರಾ ? ಈ ಅಧಿಕಾರಿಗೆ ಅದು ಅನ್ವಯ ಆಗುತ್ತದೆಯೇ ಎಂಬುದನ್ನು ತಿಳಿದುಕೊಂಡಿದ್ದೀರಾ ?

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಚನ್ನಬಸಪ್ಪನವರು ನುಣುಪಾಗಿ ಹೇಳಬೇಕು ಎಂದು ಹೇಳಿದರು. ಲಂಚ ಹೇಗೆ ನುಣುಪಾಗಿ ಹೊಡೆಯುತ್ತಾರೋ ನಮಗೆ ಗೊತ್ತಿಲ್ಲ.

ಅಧ್ಯಕ್ಷರು.— ನೀವು ನೀವೇ ಮಾತನಾಡಿದರೆ ಹೇಗೆ ? ಹಾಗೆ ಮಾಡುವುದಾದರೆ ನಾನು ಅಡ್ಜರ್ನ್ ಮಾಡಿ ಹೋಗುತ್ತೇನೆ. ನೀವು ಬೇಕಾದರೆ ಮಾತನಾಡಿ. ಏನೇನಾಗಿದೆ ಎಂಬುದನ್ನು ನಿಧಾನವಾಗಿ ಹೇಳಿ, ನಾನೂ ತಿಳಿದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ —ಮಾನ್ಯ ಚನ್ನಬಸಪ್ಪನವರು ನುಣುಪಾಗಿ ಹೇಳಬೇಕು ಎಂದು ಹೇಳಿದ್ದಾರೆ. ಅದು ಹೇಗೆ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ನುಣುಪಾಗಿ ಎಂದರೆ ಬೆಣ್ಣೆ ಸವರಿ ಹೇಳಬೇಕೇ ?

(ನಗು)

ಶ್ರೀ ಕೋಣಂದೂರು ಲಿಂಗಪ್ಪ.—ಆ ಅಧಿಕಾರಿ ಎಲ್ಲೆಲ್ಲಿದ್ದ, ಏನೇನು ಮಾಡಿದ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಶಾಸನಸಭೆಯಲ್ಲಿ ಖಚಿತವಾದ ಆರೋಪಗಳನ್ನು ತೋರಿಸಿ ಹಿಡಿದುಕೊಟ್ಟರೂ ಕೂಡ ಕ್ರಮ ತೆಗೆದುಕೊಳ್ಳುತ್ತಿಲ್ಲ. ಪ್ರೊಸೀಜರ್ ಫಾಲೋ ಮಾಡುವುದಕ್ಕೆ ನಿಮಗೆ ಎಷ್ಟು ಕಾಲಬೇಕು ಹೇಳುತ್ತೀರಾ ?

ಶ್ರೀ ಡಿ ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಅಪಾದನೆಗಳು ಬಂದಾಗ ಡಿವಿಜನರ್ ಕಮಿಷನರ್ ಅವರಿಗೆ ಎನ್‌ಕ್ವೈರಿ ಮಾಡುವುದಕ್ಕೆ ಕಳಿಸಿದ್ದೇವೆ. ನಾವೇ ಸ್ವತಃ ಏನೂ ಮಾಡುವುದಿಲ್ಲ ಎನ್‌ಕ್ವೈರಿ ಮಾಡುವಾಗ ನಪೆಂಡ್ ಮಾಡಿದ್ದೇವೆ. ಈಗ ಮತ್ತೆ ಎನ್‌ಕ್ವೈರಿ ಪೂರ್ಣವಾಗಿಲ್ಲ. ಮುನಿಸಿಪಲ್ ಕಚೇರಿಗೆ ತೊಂದರೆಯಾಗಬಾರದು, ಕೆಲಸಕಾರ್ಯಗಳಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ರೀ ಇನ್‌ಸ್ಟೇಟ್ ಮಾಡಿ ಹಾಕಿದ್ದೇವೆ. ಬೀದರ್‌ಗೆ ಹಾಕಿದಾಗ ಅಲ್ಲಿ ಅಲಗೇಷನ್ ಬಂದಿದ್ದರಿಂದ ಅಲ್ಲಿಂದ ತೆಗೆದು ಹಾಸನಕ್ಕೆ ಹಾಕಿದರು ಅಲ್ಲೂ ಅಲಗೇಷನ್ ಬಂದಿದ್ದರಿಂದ ಹೊಸಪೇಜೆಗೆ ಹಾಕಿದ್ದಾರೆ. ಇನ್ನು ಏನು ಮಾಡಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ನನಗೂ ಅರ್ಥವಾಗಲಿಲ್ಲ. ನಿರ್ದಿಷ್ಟ ಅಧಿಕಾರಿಯ ಬಗ್ಗೆ ಈ ವರ್ತನೆ ಯಾರಿಗೂ ಅರ್ಥವಾಗುವುದಿಲ್ಲ.

ಶ್ರೀ ಕೆ ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಈ ಅಧಿಕಾರಿ ಮಾಡಿರತಕ್ಕ ಅಕ್ರಮಗಳ ಬಗ್ಗೆ ವಿಚಾರಣೆ ಮಾಡಿ ಅಕ್ರಮವಾಗಿ ಹಂಚಿರುವ ಸೈಟುಗಳನ್ನು ವಜಾ ಮಾಡುವುದರ ಜೊತೆಗೆ ಈ ಅಧಿಕಾರಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ.ಕೆ. ನಾಯ್ಕರ್.—ವಿಚಾರಣೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು. ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ ಎಚ್ ಹನುಮೇಗೌಡ.—ಅಧ್ಯಕ್ಷರೇ.....

ಅಧ್ಯಕ್ಷರು.—ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ ಮಾನ್ಯ ಸದಸ್ಯರು ದಯವಿಟ್ಟು ಸುಮ್ಮನಿರಬೇಕು. ಈಗ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

Construction of Medium Irrigation Tank

419 SRI PRABHURAJ PATIL (Yelburga).—Will the Chief Minister be pleased to state.—

(*a*) whether it has come to notice of Government that a request has been made for the construction of a Medium Irrigation Tank near Bevoor village, in Yelburga Taluk, of Raichur District.

(*b*) if so, the stage of this work;

(*c*) when the said work will be taken up ?

SRI D. DEVABAJ URS (Chief Minister).—

(*a*) Yes.

(*b*) and (*c*) According to preliminary enquiry this work is found to be not feasible.